ತಲೆಹಾಕಿಲ್ಲ. ಸಾಹೇಬರನ್ನು ಕಣ್ಣಲ್ಲಿ ಕಣ್ಣು ಇಟ್ಟುಕೊಂಡು ಕಾಪಾಡಿದವಳು ನಾನು. ಬಾಯಿ ಮುಚ್ಚಿ. ಹಾಂ, ನಿಮ್ಮ ಆಸ್ತಿ ವಿಚಾರ ನನಗೆ ತಿಳಿದಿದ್ದೂ ಕೂಡಾ ಈಗಲೇ.''

ಅವಳ ಮಾತುಗಳಿಗೆ ಅಲ್ಲಿದ್ದವರೆಲ್ಲರೂ ಬೆಚ್ಚಿಬಿದ್ದರು. ಅಲ್ಲಿಯವರೆಗೆ ದೀನಳಂತಿದ್ದ ಅವಳ ವರ್ತನೆ ಎಲ್ಲರಿಗೂ ಒಮ್ಮೆ ಭಯ ತಂದಿತು.

ಸುನೀಲ್ ಮೊದಲು ಸಾವರಿಸಿಕೊಂಡು "ನೋಡಿ ಇದು ನಮ್ಮ ನಮ್ಮ ಮನೆ ಜಗಳ. ಇಲ್ಲಿ ದೊಡ್ಡಪ್ಪ ಸತ್ತು ಬಿದ್ದಿದ್ದಾರೆ. ಈ ಮಾತುಗಳೆಲ್ಲ ಸರಿಯಲ್ಲ. ಆನಂತರ ಕೂತು ಇತ್ಯರ್ಥ ಮಾಡಿಕೊಳ್ಳಬಹುದು. ಮೊದಲು ಬಾಡಿಯನ್ನು ಇಲ್ಲಿಂದ ಹೊರತೆಗೆದು ಪೋಸ್ಟ್‌ಮಾರ್ಟಂಗೆ ಕಳುಹಿಸಿ ಮಾತಾಡೋಣ" ಎಂದ.

"ನಿನಗೆ ಯಾವ ದೊಡ್ಡಪ್ಪಾನೋ? ನೀನು ಯಾರೂ ಅಂತಾನೇ ಗೊತ್ತಿಲ್ಲ. ಕೇಳೋಣ ಅಂದ್ರೆ ಇವನಿಲ್ಲ. ನೀನು ಯಾವಾಗ ಹುಟ್ಟಿಕೊಂಡೆ? ಯಾರ ಮಗ, ನಮಗೆ ಹೇಗೆ ಸಂಬಂಧಿ ಎಂಬುದು ಗೊತ್ತಿಲ್ಲ. ಇಲ್ಲಿಯ ವಿಚಾರಕ್ಕೆ ತಲೆ ಹಾಕಕ್ಕೆ ಬರ್ತೀಯ?" ಎಂದು ಅಲ್ಲಿದ್ದ ಬಂಧುಗಳಲ್ಲೊಬ್ಬ ತನ್ನ ಸಿಟ್ಟನ್ನು ಹೊರಹಾಕಿದ.

ಅವರಿಬ್ಬರ ಮಾತುಗಳಿಗೂ ತನಗೂ ಸಂಬಂಧವೇ ಇಲ್ಲ ಎಂಬಂತೆ ನಾಗರಾಜಯ್ಯ,

"ಸೋ ಮೋಟಿವ್ ಇಲ್ಲಿ ವಿಶ್ವನಾಥಯ್ಯನ ಆಸ್ತಿ. ಕೊಲೆ ನಡೆದಿರುವುದೂ ಅದಕ್ಕೇ. ಆಸ್ತಿ ಎಲ್ಲ ವಿಶಾಲಾಕ್ಷಮ್ಮನಿಗೆ ಬರೆದಿದ್ದಾರೆ, ಅದನ್ನು ಬದಲಾಯಿಸಬೇಕು ಎಂದು ಬಯಸಿದಾಗ ಅವರ ಕೊಲೆ ಆಗಿದೆ. ಅದನ್ನು ಮೊದಲು ನೋಡಿದವರೂ ವಿಶಾಲಾಕ್ಷಮ್ಮನೇ. ಸೋ, ಅನುಮಾನ ಅವರ ಮೇಲೇ ಬರುತ್ತಿದೆ. ಆಸ್ತಿಗಾಗಿ ಕೊಲೆ ಮಾಡಿಬಿಟ್ಟೆಯಾ ವಿಶಾಲಾಕ್ಷಮ್ಮಾ" ಎಂದ ನಾಗರಾಜಯ್ಯನ ಮಾತಿನಲ್ಲಿದ್ದ ವ್ಯಂಗ್ಯ ಮೊನಚಾಗಿತ್ತು.

"ಮೊದಲು ಅರೆಸ್ಟ್ ಮಾಡಿ ಸರ್. ನಮ್ಮ ಮಾವನನ್ನು ಕೊಲೆ ಮಾಡಿ ಆಸ್ತಿ ಎಲ್ಲ ಹೊಡೆಯಬೇಕೆಂದು ನೋಡುತ್ತಿದ್ದಾಳೆ. ಅದಕ್ಕೇ ನಮ್ಮನ್ನೆಲ್ಲಾ ಇಲ್ಲಿಗೆ ಬರಹೇಳಿದ್ದು ಅನಿಸುತ್ತಿದೆ" ಎಂದು ರಜನಿ ಅದೇ ಗಟ್ಟಿಧ್ವನಿಯಲ್ಲಿ ಕೂಗಿದಳು.

ಅವಳ ಧ್ವನಿಗೆ ಇತರರೂ ತಮ್ಮ ಅನಿಸಿಕೆ ಸೇರಿಸತೊಡಗಿದಾಗ...

"ನಿಲ್ಲಿ, ಶವ ನೋಡಿದರೆ ಈ ಸಾವು ಐದರಿಂದ ಆರು ಗಂಟೆಯ ಒಳಗಡೆ ಆಗಿದೆ ಅನಿಸುತ್ತಿದೆ. ಈ ವಿಶಾಲಾಕ್ಷಮ್ಮ ಸುಮಾರು ಆರೂವರೆಗೆ ನೋಡಿದೆ ಅನ್ನುತ್ತಿದ್ದಾಳೆ. ನಮಗೆ ಫೋನ್ ಮಾಡಿದ್ದು ಏಳು ಗಂಟೆಗೆ. ಯಾವುದೇ ಗಂಡಿನ ಶಬ್ದ, ಚೀರಾಟ ಯಾರಿಗೂ ಕೇಳಿಲ್ಲ. ಅವರನ್ನು ನೋಡಿದರೆ ಕೊಲೆ ಮಾಡಿ ನಿಂತವರಂತಿಲ್ಲ. ಇಲ್ಲೇನೋ ಮಿಸ್ಸಿಂಗ್ ಇದೆ..." ಎಂದು ನಾಗರಾಜಯ್ಯ ತನ್ನ ಬೋಳು ತಲೆ ಸವರಿಕೊಳ್ಳುತ್ತಾ ನುಡಿದ.

ಅವನು ಬಂದು ಒಂದು ಗಂಟೆ ಆಗಿದೆ. ಇನ್ನೂ ಮಾತುಕತೆ ನಡೆಯುತ್ತಿದೆ. ಶವ ಸಾಗಿಸಿಲ್ಲ ಎಂಬ ಭಯ ಕೆಲವರಿಗೆ. ಇನ್ನೂ ಕೆಲವರಿಗೆ ನಂತರ ಏನು ಎನ್ನುವ ಭಯ. ಅದು ಎಲ್ಲರ ಮುಖದಲ್ಲಿಯೂ ಕಾಣುತ್ತಿತ್ತು. ಕೆಲವರಿಗೆ ಬೆವರಿನ ರೂಪದಲ್ಲಿಯೂ ಒಸರತೊಡಗಿತು.

"ಸಾರ್ ನಾವೆಲ್ಲರೂ ಗಾಢ ನಿದ್ದೆಯಲ್ಲಿ ಇದ್ದೆವು. ವಿಶಾಲಾಕ್ಷಮ್ಮ ಚೀರಿದಾಗ ಒಬ್ಬೊಬ್ಬರಾಗಿ ಎದ್ದು ಬಂದೆವು. ಹಾಗಾಗಿ ಲೇಟ್ ಆಯಿತು. ಅದಕ್ಕೇ ನಿಮಗೆ ಫೋನ್ ಮಾಡಿದ್ದೂ ತಡವಾಗಿ!" ಅಲ್ಲಿದ್ದವನೊಬ್ಬ ಮುಂದೆ ಬಂದು ಸಮಜಾಯಿಷಿ ಕೊಡಲು ಯತ್ನಿಸಿದ.

ಅವನ ಮಾತುಗಳನ್ನು ಸಹಾ ಕೇಳದೇ ನಾಗರಾಜಯ್ಯ "ಎಚ್ಚರ ಆಗಿರಲಿಲ್ಲ ಎಂದರೆ ಏನು, ಎಲ್ಲಾ ಕುಡಿದಿದ್ದೀರಾ?"